**ಬಂಗಾಲಿ ಮೂಲ : ಪ್ರಭಾತಕುಮಾರ್ ಮುಖ್ಯೋಪಾಧ್ಯಾಯ**
**ಬಂಗಾಲಿಯಿಂದ ಇಂಗ್ಲಿಷ್‌ಗೆ : ಲೀಲಾ ರಾಯ್**
**ಕನ್ನಡಕ್ಕೆ : ತಂಬ್ರಹಳ್ಳಿ ರಾಮನಮಲಿ**

# ಪುಷ್ಪಾಂಜಲಿ

ಲಂಡನ್ನಿನ ಅನೇಕ ಭಾಗಗಳಲ್ಲಿ ಸಸ್ಯಾಹಾರಿ ಹೋಟೆಲ್‌ಗಳು ಕಂಡುಬರುತ್ತವೆ. ಒಂದು ದಿನ ನಾನು ನ್ಯಾಷನಲ್ ಗ್ಯಾಲರಿಯ ಸುತ್ತ ನಡೆದಾಡುತ್ತಾ ಚಿತ್ರಗಳನ್ನು ನೋಡಲು ಪ್ರಯತ್ನಿಸುತ್ತಿದ್ದೆ.ಆಗಲೇ ಒಂದು ಗಂಟೆ ಆಗಿದ್ದರಿಂದ ನಾನು ಹಸಿವಿನಿಂದ ತುಂಬಾ ಬಳಲಿದ್ದೆ. ಆದ್ದರಿಂದ ಅಲ್ಲಿಂದ ಅನತಿ ದೂರದಲ್ಲಿದ್ದ ಸೇಂಟ್‌ಮಾರ್ಟಿನ್ಸ್ ರಸ್ತೆಯ ಒಂದು ಹೋಟೆಲ್ಲಿನ ಕಡೆಗೆ ನಿಧಾನವಾಗಿ ಹಜ್ಜೆ ಹಾಕಿದೆ. ಆ ದಿನಗಳಲ್ಲಿ ಲಂಡನ್ನಿನ ಹೋಟೆಲ್‌ಗಳಲ್ಲಿ ಮಧ್ಯಾಹ್ನದ ಊಟದ ಹೊತ್ತು ಜನಜಂಗುಳಿ ಇರುತ್ತಿರಲಿಲ್ಲ. ಊಟದ ಕೋಣೆಯಲ್ಲಿ ನಾನು ಮೂರ್ನಾಲ್ಕು ಹಸಿದ ಜನಕ್ಕಿಂತಲೂ ಹೆಚ್ಚಿನವರನ್ನು ಕಾಣಲಿಲ್ಲ. ಒಂದು ಟೇಬಲ್ ಆಯ್ಕೆ ಮಾಡಿ ಕೂತು ದಿನಪತ್ರಿಕೆಯನ್ನು ತೆಗೆದೆ.

ಒಬ್ಬ ಉಪಚಾರಿಕೆ ಬಳಿ ಬಂದು ಸೌಜನ್ಯದಿಂದ ನನ್ನ ಸೂಚನೆಗೆ ಕಾದಳು. ಪೇಪರಿನಿಂದ ನನ್ನ ಚಿತ್ತವನ್ನು ಬದಲಿಸಿ ಮೆನು ಮೇಲೆ ಕಣ್ಣಾಡಿಸಿದೆ, ನನಗೆ ಬೇಕಾಗಿರುವುದನ್ನು ಹೇಳಿದೆ. ವಂದನೆಗಳು ಎಂದು ಹೇಳುತ್ತಾ ಅವಳು ಗತ್ತಿನಿಂದ ಪುಟು ಪುಟು ನಡೆದಳು.

ಆ ಕ್ಷಣದಲ್ಲಿ ನನ್ನ ದೃಷ್ಟಿ ಹತ್ತಿರವೇ ಇದ್ದ ಇನ್ನೊಂದು ಟೇಬಲ್ಲಿನ ಕಡೆ ಎಳೆಯಿತು. ಅಲ್ಲಿ ಒಬ್ಬ ಯುವ ಇಂಗ್ಲಿಷ್ ಬೆಡಗಿ ಕುಳಿತಿದ್ದಳು. ಅವಳು ನನ್ನ ಕಡೆ ಕುತೂಹಲದಿಂದ ನೋಡುತ್ತಿದ್ದಳು. ಆದರೆ ನಾನು ಅವಳತ್ತ ನೋಡಿದ ಕೂಡಲೇ ಅವಳು ತನ್ನ ದೃಷ್ಟಿಯನ್ನು ಬೇರೆಡೆಗೆ ತಿರುಗಿಸುತ್ತಿದ್ದಳು. ಅವಳ ಕುತೂಹಲದಲ್ಲಿ ಹೊಸದೇನೂ ಇರಲಿಲ್ಲ. ಬಿಳಿಯರ ದೇಶದಲ್ಲಿ ನಮ್ಮ ಬಣ್ಣದ ಸಹಜತೆಗೆ ಮತ್ತು ಸೌಂದರ್ಯಕ್ಕೆ ಮರುಳಾಗುತ್ತಾರೆ. ನಾವು ಅರ್ಹತೆಗಿಂತಲೂ ಹೆಚ್ಚಿಗೆ ಸತ್ಕಾರಗೊಳ್ಳುತ್ತೇವೆ.

ಆ ಹುಡುಗಿ ಹದಿಮೂರು ಅಥವಾ ಹದಿನಾಲ್ಕು ವರ್ಷದವಳು. ಬಟ್ಟೆಗಳು ಅವಳ ಬಡತನವನ್ನು ಬಿಂಬಿಸುತ್ತಿದ್ದವು. ವಿಶಾಲವಾದ ಕೂದಲು ಬೆನ್ನ ಹಿಂದುಗಡೆ ನೇತಾಡುತ್ತಿದ್ದವು, ಅವಳ ಕಣ್ಣುಗಳು ದೊಡ್ಡವಿದ್ದವು, ಅವು ವಿಷಾದ ಸೂಚಿಸುತ್ತಿದ್ದವು. ನಾನು ಅವಳ ಗಮನಕ್ಕೆ ಬಾರದ ಹಾಗೆ ಅವಳನ್ನು ನೋಡುತ್ತಿದ್ದೆ. ಅವಳ ಊಟ ಮುಗಿಯುವ ಹೊತ್ತಿಗೆ ನನ್ನ ಊಟ ಬಂತು. ಪರಿಚಾರಿಕೆ ಊಟದ ಬಿಲ್ಲನ್ನು ತಂದಿತ್ತಳು. ಬಿಲ್ಲಿನ ಪಾವತಿ ಗಲ್ಲೇದ ಹತ್ತಿರ ಆಗುತ್ತಿತ್ತು, ಬಾಗಿಲ ಹತ್ತಿರವೇ ಗಲ್ಲೇ ಇತ್ತು.

ಹುಡುಗಿ ಎದ್ದಳು. ನನ್ನ ಕಣ್ಣುಗಳು ಅವಳನ್ನು ಹಿಂಬಾಲಿಸಿದವು. ಅವಳು ತನ್ನ ಬಿಲ್ಲನ್ನು ಪಾವತಿ ಮಾಡಿದ ಕೂಡಲೇ ಮಾಲೀಕಳನ್ನು ಪಿಸು ದನಿಯಲ್ಲಿ 'ಮಿಸ್, ಅಲ್ಲಿರುವವರು ಭಾರತೀಯರೇ? ದಯಮಾಡಿ ಹೇಳಿ.' 'ಇರಬೇಕು' ಎಂದು ಮಾಲೀಕಳು ನುಡಿದಳು. 'ಇಲ್ಲಿಗೆ ಅವರು